ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ESTD - 1964

ಊಟಿರಸ್ತೆ, ಮೈಸೂರು-೫೭೦ ೦೨೫

☎ 0821-2548236 & 2548380 Fax: 0821-2548238 E-mail: jssautonomous@gmail.com


ದಿನಾಂಕ: 25.11.2015

**<u>ಪ್ರಕಟಣೆ ಕೃಪೆಗಾಗಿ</u>**

**<u>ಅಂಕಿಅಂಶ ಭೌತಶಾಸ್ತ್ರ' ಕುರಿತ ಬೋಧನಾ ಕಾರ್ಯಗಾರ : 25-27 ನವೆಂಬರ್ 2015</u>**

ಮೈಸೂರು, ನವೆಂಬರ್ 25 – ವಿಜ್ಞಾನ ಅಕಾಡೆಮಿಗಳ ಪ್ರಾಯೋಜಕತ್ವದಲ್ಲಿ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ 'ಅಂಕಿಅಂಶ ಭೌತಶಾಸ್ತ್ರ' ಕುರಿತ ಮೂರು ದಿನಗಳ ಬೋಧನಾ ಕಾರ್ಯಗಾರವನ್ನು ಉದ್ಘಾಟಿಸಲಾಯಿತು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡುತ್ತಾ 'ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅಂಕಿಅಂಶ ಭೌತಶಾಸ್ತ್ರದ ಪಾತ್ರ ತುಂಬಾ ಮುಖ್ಯವಾದುದು. ಕಣಗಳ ವರ್ತನೆ ಮತ್ತು ಅವುಗಳ ಗುಣಗಳನ್ನು ಕುರಿತು ಸೂಕ್ಷ್ಮವಾಗಿ ಅಧ್ಯಯನ ಮಾಡಲು ಅಂಕಿಅಂಶ ಭೌತಶಾಸ್ತ್ರ ಸಹಕಾರಿಯಾದುದು' ಎಂದು ತಿಳಿಸಿದರು.

ಕಾರ್ಯಗಾರದ ಸಂಚಾಲಕರು ಹಾಗೂ ಬೆಂಗಳೂರಿನ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಸದಸ್ಯರೂ ಆದ ಪ್ರೊ. ಜಿ. ಶ್ರೀನಿವಾಸನ್ ಅವರು ಮಾತನಾಡುತ್ತಾ ನಿಸರ್ಗದ ದೈನಂದಿನ ಚಟುವಟಿಕೆಯಲ್ಲಿ ಭೌತಶಾಸ್ತ್ರದ ಪಾತ್ರವನ್ನು ವಿದ್ಯಾರ್ಥಿಗಳು ಗ್ರಹಿಸುವಂತೆ ಮಾಡುವಲ್ಲಿ ಇಂತಹ ಕಾರ್ಯಾಗಾರಗಳು ಉತ್ತೇಜನ ನೀಡುತ್ತವೆ ಎಂದು ತಿಳಿಸಿದರು.

ಬೆಂಗಳೂರಿನ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಮತ್ತೋರ್ವ ಸದಸ್ಯರಾದ ಪ್ರೊ. ಆರ್. ಶ್ರೀನಿವಾಸನ್ ಮತ್ತು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ಉಪಸ್ಥಿತರಿದ್ದರು.

ಬೋಧಕರೂ, ವಿದ್ಯಾರ್ಥಿಗಳೂ ಸೇರಿದಂತೆ ಒಟ್ಟು 170 ಮಂದಿ ಪ್ರತಿನಿಧಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದಾರೆ.

ಡಾ. ವಿಜಯ ಮಂಜುನಾಥ್ ಗುರು ಅವರು ಸ್ವಾಗತಿಸಿದರು. ಡಾ. ವಿಜಯ್‌ಕುಮಾರ್ ವಂದಿಸಿದರು. ಕು. ಸಹನಾ ಸಿ. ಎನ್ ಅವರು ಪ್ರಾರ್ಥಿಸಿದರು.

ಪ್ರಾಂಶುಪಾಲರು

ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು-570 025.

ಗೆ

ಸಂಪಾದಕರು

_______________

_______________

ಮೈಸೂರು